ದಿನಾಂಕ ಃ **12.11.2019** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ ಃ

ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಗುರುತಿಸಲು ಪ್ರಾರ್ಥಿಸಿಕೊಳ್ಳುತ್ತೇನೆ.

ದಾವಾ ಆಸ್ತಿಗೆ ಸಂಬಂದಿಸಿದಂತೆ ಒಟ್ಟು 3 ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 ರಿಂದ 3 ಎಂದು, ಉಪನೋಂದಣಾದಿಕಾರಿಗಳ ಕಚೇರಿಯ ಪ್ರಪತ್ರ ಸಂಖ್ಯೆ 15 ಹಾಜರು ಪಡಿಸಿದ್ದು ಅದನ್ನು ನಿಪಿ 4 ಎಂದು, 2 ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 5 ಮತ್ತು 6 ಎಂದು, 2 ರುಣಭಾರ ರಾಹೀತ್ಯ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 7 ಮತ್ತು 8 ಎಂದು, ಒಂದು ಪಹಣಿ ಪತ್ರಿಕೆ ಹಾಜರು ಪಡಿಸಿದ್ದು ಅದನ್ನು ನಿಪಿ 9 ಎಂದು, ಒಂದು ರುಣಭಾರ ರಾಹೀತ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 10 ಎಂದು, ಮೂರು ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 11 ರಿಂದ 13 ಎಂದು, ಒಂದು ರುಣಭಾರ ರಾಹೀತ್ಯ ಪ್ರಮಾಣ ಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ 14 ಎಂದು, ಒಂದು ಪಹಣಿ ಪತ್ರಿಕೆ ಹಾಜರು ಪಡಿಸಿದ್ದು ಅದನ್ನು ನಿಪಿ 15 ಎಂದು, ಒಂದು ರುಣಭಾರ ರಾಹೀತ್ಯ ಪ್ರಮಾಣ ಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ 16 ಎಂದು, ಒಂದು ಪಹಣಿ ಪತ್ರಿಕೆ ಹಾಜರು ಪಡಿಸಿದ್ದು ಅದನ್ನು ನಿಪಿ 17 ಎಂದು, ಒಂದು ರುಣಭಾರ ರಾಹೀತ್ಯ ಪ್ರಮಾಣ ಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ 18 ಎಂದು, ಗ್ರಾಮ ಪಂಚಾಯತಿವರು ನೀಡಿದ 4 ದೃಡೀಕರಣ ಪತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 19 ರಿಂದ 22 ಎಂದು, ಮಲ್ಲಪ್ಪ ಮೇಗಿನಮನಿ ನನ್ನ ತಂದೆಗೆ ಬರೆದುಕೊಟ್ಟ ದಿನಾಂಕ ಃ 09.09.1981 ರ ಖರೀದಿ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 23 ಎಂದು, ನಿಂಗಪ್ಪ ಮೇಗಿನಮನಿ ಈತನು 1ನೇ ಪ್ರತಿವಾದಿಗೆ ದಿನಾಂಕ ಃ 22.04.1987

ರಂದು ಬರೆದುಕೊಟ್ಟ ಖರೀದಿ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 24 ಎಂದು, 6 ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 25 ರಿಂದ 30 ಎಂದು ಗುರುತಿಸಲಾಯಿತು.

**(ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೆ ಸರಿ ಇದೆ.

2ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.